ದಿನಾಂಕಃ **07.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ವಿ.ಕೆ ರವರಿಂದಃ

ನಾನು **BESCOM** ಮುಖ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಮ್ಮ ಕಛೇರಿಯ ಕಾರ್ಯ ನಿರ್ವಾಹಕ ಕಛೇರಿಯು **Corporate office, KR Circle, Bengaluru** ನಲ್ಲಿ ಇರುತ್ತದೆ. ಲಕ್ಷ್ಮಿನಾರಾಯಣ್ ನನ್ನ ಮಾವ. ಲಕ್ಷ್ಮಿನಾರಾಯಣ್ ರವರು ಬಿ.ಇ.ಎಲ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಾವಾ ಸ್ವತ್ತಿಗೆ ನಾನು ಹಾಜರು ಪಡಿಸಿರುವ ನಿಡಿ-**7** ದಾಖಲೆಯು **1972** ನೇ ಇಸವಿಗೆ ಸಂಬಂಧಿಸಿದ್ದಾಗಿರುತ್ತದೆ. ನಿಡಿ-**7** ದಾಖಲೆ ಹಕ್ಕು ದಾಖಲೆ ಪತ್ರ ಕೆ.ಮುನಿರಾಜು ರವರ ಹೆಸರಿಗೆ ನೀಡಲಾಗಿರುತ್ತದೆ. ನಿಡಿ-**7** ದಾಖಲೆಯು ಸೈಟ್ ನಂ.**102** ಕ್ಕೆ ಸಂಬಂಧಿಸಿದ್ದಾಗಿರುತ್ತದೆ. ನಿಡಿ-**21** ದಾಖಲೆಯು ಕಂದಾಯ ರಶೀದಿ ಆಗಿರುತ್ತದೆ. ನಿಡಿ-**21** ಕಂದಾಯ ರಶೀದಿ ದಾಖಲೆಯಲ್ಲಿ ಸೈಟ್ ನಂ.**118** ಎಂದು ನಮೂದಾಗಿರುತ್ತದೆ. ಸಾಕ್ಷಿಯು ಮುಂದುವರೆದು ಆದರೆ ಹಳೆ ಸೈಟ್ ನಂ.**102** ಹೋಸ ಸೈಟ್ ನಂ.**118** ಎಂದು ದಾಖಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸೈಟ್ ನಂ.**102** ದ ಸೈಟ್ ನಂ.**118** ಆಗಿ ಮಾರ್ಪಾಡು ಆಗಿದಕ್ಕೆ ಸಂಬಂಧಿತ ಕ್ರಯ ಪತ್ರ ನನ್ನ ಬಳಿ ಇರುತ್ತದೆ. ಸೈಟ್ ನಂ.**102** ದ ಸೈಟ್ ನಂ.**118** ಮಾರ್ಪಾಡು ಆಗಿದಕ್ಕೆ ಸಂಬಂಧಿಸಿ ಸರ್ಕಾರದಿಂದ ಯಾವುದಾದರು ದಾಖಲೆಗಳನ್ನು ಹೊರಡಿಸಿರುತ್ತಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಿಡಿ-**20**

ಫಾರಂ ನಂ.**10** ಹಳೆ ನಂ.**102** ಹೊಸ ನಂ.**118** ಕ್ಕೆ ಸಂಬಂಧಿತ ದಾಖಲೆ ಆಗಿರುತ್ತದೆ. ನಿಡಿ-**20** ಫಾರಂ ನಂ.**10** ರಲ್ಲಿ ಸೈಟ್ **?**ನಂ.**102** ಆಗಲಿ ಅಥವಾ ಸೈಟ್ ನಂ.**118** ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ-**20** ಫಾರಂ ನಂ.**10** ದಾಖಲೆಯು ಸೈಟ್ **?**ಂ.**118** ಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸಾಕ್ಷಿಯು ಹಳೆ ನಂ.**102** ಹೋಸ ನಂ.**118**ಕ್ಕೆ ಸಂಬಂಧಿತ ದಾಖಲಾತಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಡಿ-**20**ಎ **Assessment Register Extract** ರಲ್ಲಿ ಸಹ ಸೈಟ್ ನಂ. **102** ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಹಳೆ ನಂ.**102** ಹೊಸ ನಂ.**118** ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.